**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 95/2020**

**ಚಾ.ಸಾಃ 7, ಫ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ವಿನಾಯಕ ಭಟ್ಟ |
| ತಂದೆಯ ಹೆಸರು | ಸುಬ್ರಹ್ಮಣ್ಯ ಭಟ್ಟ |
| ವಯಸ್ಸು | 50 ವರ್ಷಗಳು |
| ಉದ್ಯೋಗ | ರೈತಾಬಿ |
| ವಾಸ್ತವ್ಯ | ಸಾಲ್ಕೋಡ |

**ಸಾಕ್ಷಿಯನ್ನು ದಿನಾಂಕಃ 26-05-2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ಸಾಕ್ಷಿಗೆ ಈ ಪ್ರಕರಣದಲ್ಲಿ ಹಾಜರು ಮಾಡಿರುವ ಆಭರಣಗಳ ಜಪ್ತು ಪಂಚನಾಮೆಯ ನೈಜ ಪ್ರತಿಯನ್ನು ತೋರಿಸಲಾಗಿ ಅದರ ಮೇಲಿನ ಒಂದು ಸಹಿಯನ್ನು ತನ್ನದು ಎಂದು ತಿಳಿಸಿದ್ದರಿಂದ ಸದರಿ ಪಂಚನಾಮೆಯನ್ನು ನಿಪಿ-5 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-5(ಎ)ಎಂದು ಗುರುತಿಸಲಾಯಿತು.

ಸದರಿ ಸಹಿಯನ್ನು ದಿನಾಂಕ 05-08-2020 ರಂದು ಹೊನ್ನಾವರ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ನಾನು ಸಹಿ ಮಾಡುವ ಸಂದರ್ಭದಲ್ಲಿ ಒಂದು ಜೊತೆ ಕಿವಿಯೋಲೆ, ಎರಡು ಉಂಗುರಗಳನ್ನು ಪ್ರತ್ಯೇಕವಾಗಿ ಇಡಲಾಗಿತ್ತು. ಸದರಿ ಆಭರಣಗಳನ್ನು ಇಬ್ಬರು ಕಳ್ಳರು ಕಳ್ಳತನ ಮಾಡಿರುವುದಾಗಿ ಪೋಲಿಸರು ತಿಳಿಸಿರುತ್ತಾರೆ. ಸದರಿ ಆಭರಣಗಳನ್ನು ಚಾಸಾ-10 ದೀಪಕ್ ಶೆಟ್ಟರವರು ತೂಕ ಮಾಡಿ ಮೌಲ್ಯಮಾಪನ ಮಾಡಿರುತ್ತಾರೆ. ಸದರಿ ಆಭರಣಗಳನ್ನು ಚಾಸಾ-9 ಅನಿಲ್ ಶೇಟ್ ನೀಡಿರುವುದಾಗಿ ಪೋಲಿಸರು ತಿಳಿಸಿರುತ್ತಾರೆ. ಆ ಸಂದರ್ಭದಲ್ಲಿ ಪಂಚನಾಮೆ ಮಾಡಿ ಛಾಯಾಚಿತ್ರವನ್ನು ತೆಗಸಿರುತ್ತಾರೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಛಾಯಾಚಿತ್ರವನ್ನು ಗುರುತಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

ಸದರಿ ಆಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಪ್ರಕರಣದಲ್ಲಿ ಹಾಜರು ಮಾಡಿರುವ ಉಂಗುರಗಳನ್ನು ಸಾಕ್ಷಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ಮುಮಾ-1 ಮತ್ತು 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ಸದರಿ ದಿನದಂದು ನಾನು ಠಾಣೆಗೆ ಹೋದಾಗ ಪೋಲಿಸರು ಸುಮಾರು 50 ಕ್ಕಿಂತಲೂ ಹೆಚ್ಚು ಆಭರಣಗಳನ್ನು ಇಟ್ಟಿದ್ದರು. ಯಾವ ಯಾವ ಆಭರಣಗಳು ಯಾವ ಯಾವ ಪ್ರಕರಣಕ್ಕೆ ಸಂಬಧಿಸಿದ್ದವು ಎನ್ನುವುದನ್ನು ಪೋಲಿಸರು ಆಗ ನನಗೆ ಹೇಳಿದ್ದು ಈಗ ನನಗೆ ನೆನಪಿರುವುದಿಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2 ಆಭರಣಗಳು ಇದ್ದವು. ಸದರಿ ಆಭರಣಗಳು ಈ ಪ್ರಕರಣಕ್ಕೆ ಸಂಬಂಧಿಸಿದ ಆಭರಣಗಳು ಎಂದು ಪೋಲಿಸರು ನನಗೆ ಹೇಳಿರುತ್ತಾರೆ. ಅವುಗಳ ತೂಕ ನನಗೆ ಗೊತ್ತಿಲ್ಲ. ನಾನು ಠಾಣೆಗೆ ಹೋಗುವ ಪೂರ್ವದಲ್ಲಿಯೇ ಆಭರಣಗಳು ಟೇಬಲ್ ಮೇಲೆ ಇದ್ದವು. ನನ್ನ ಸಮಕ್ಷಮ ಆಭರಣಗಳನ್ನು ಯಾರು ಹಾಜರು ಮಾಡಿರುವುದಿಲ್ಲ.

ಸದರಿ ದಿನದಂದು ನಾನು ಠಾಣೆಗೆ ಹೋಗಿಲ್ಲ, ಪೋಲಿಸರು ನನ್ನ ಸಮಕ್ಷಮ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ಆಭರಣಗಳನ್ನು ಜಪ್ತು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**